**ಎಮ್.ವಿ.ಸಿ. ನಂಃ 1176 /2024**
**ಪಿ.ಡಬ್ಲ್ಯೂಃ1, ಮಲ್ಲಯ್ಯಾ**

**ದಿನಾಂಕ : 09-01-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟಿ ಸವಾಲು :- ಶ್ರೀ. ಎ.ಎಮ್. ವಾಯ್. ಎದುರುದಾರ ಪರ ವಕೀಲರಿಂದ :**

ನಾನು ಶಾಲೆ ಕಲಿತಿಲ್ಲಾ, ನಾನು ನಿರಗುಡಿ ಗ್ರಾಮದಲ್ಲಿ ವಾಸ ಇರುತ್ತೇನೆ. ಮೃತ ಗುರುಲಿಂಗ ಶಿವಚಾರ್ಯ ಸ್ವಾಮಿಜಿ ನನ್ನ ಮಗ. ಮೃತ ಗುರುಲಿಂಗ ಶಿವಚಾರ್ಯ ಸ್ವಾಮಿಜಿ ಬಂಗರಗಾ ಗ್ರಾಮದ ಮಠದ ಪೀಠಾಧೀಶರಾಗಿದ್ದರು. ಮೃತ ಗುರುಲಿಂಗ ಶಿವಚಾರ್ಯ ಸ್ವಾಮಿಜಿ ಇವರು 30 ವರ್ಷದ ಹಿಂದೆ ಮಠದ ಪೀಠಾಧಿಪತಿ ಆಗಿದ್ದರು. ಅವರು ಮಠದಲ್ಲಿಯೇ ವಾಸ ಇದ್ದರು. ಒಂದು ವೇಳೆ ಮಠ ಪೀಠಾಧೀಶರಾದ ಮೇಲೆ ತಂದೆ ತಾಯಿ ಬಂಧು ಬಳಕ ಸಂಪರ್ಕ ಕಳೆದುಕೊಳ್ಳುತ್ತಾರೆ ಎಂದರೆ ಸರಿಯಲ್ಲ. ನಾನು ಜಂಗಮ ಉದ್ಯೋಗ ಮಾಡುತ್ತೇನೆ. ನಮಗೆ 3 ಎಕರೆ ಜಮೀನು ಇದೆ. ನನಗೆ ಮೂರು ಜನ ಮಕ್ಕಳು, ಅವರಲ್ಲಿ ಒಬ್ಬಳು ಹೆಣ್ಣು ಮಗಳು, ಎರಡು ಜನ ಗಂಡು ಮಕ್ಕಳು. ಮೃತ ಗುರುಲಿಂಗ ಶಿವಚಾರ್ಯ ಸ್ವಾಮಿಜಿ ಇವರನ್ನು ಹಿಡಿದು ಮೂರು ಜನ ಮಕ್ಕಳು. ಎರಡನೇ ಮಗನ ಹೆಸರು ಸೋಮಶೇಖರ ಅವರ ವಯಸ್ಸು 32 ವರ್ಷ. ಅವರು 10 ನೇ ತರಗತಿ ತನಕ ಓದಿದ್ದಾರೆ. ಅವರು ಕೂಡಾ ಪೂಜೆ ಪಾಠ ಮಾಡುತ್ತಾರೆ. ಮೃತ ಗುರುಲಿಂಗ ಶಿವಚಾರ್ಯ ಸ್ವಾಮಿಜಿ ರವರ ಬಳಿ ಚಾಲನಾ ಪತ್ತ ಇತ್ತು. ಕೆ.ಎ.-32-ಝಡ್-6011 ಇದು ಮಠದ ಕಾರ. ಸದರಿ ಕಾರಿನ ವಿಮೆ, ಆರ್.ಸಿ. ಫಿಟನೆಸ್, ದಾಖಲೆಗಳು ಇದ್ದ ಬಗ್ಗೆ ನನಗೆ ಗೊತ್ತಿಲ್ಲಾ. ಮೃತ ಗುರುಲಿಂಗ ಶಿವಚಾರ್ಯ ಸ್ವಾಮಿಜಿ ಇವರು 10 ನೇ ತರಗತಿ ತನಕ ಓದಿದ್ದಾರೆ. ಮೃತ ಗುರುಲಿಂಗ ಶಿವಚಾರ್ಯ ಸ್ವಾಮಿಜಿ ಬಳಿ ಮಠದಲ್ಲಿ ಅವರ ಕೈ ಕೆಳಗೆ ಹಲವಾರು ಜನ ಕೆಲಸ

ಮಾಡುತ್ತಾರೆ ಎಂದರೆ ಸರಿ. ಸದರಿ ಮಠ ನಮ್ಮ ಮನೆತನಕ್ಕೆ ಸಂಬಂಧ ಇಲ್ಲಾ. ಮಠದ ಪೀಠಾಧೀಶರಾಗಬೇಕಾದರೆ ಅವರಿಗೆ ಯೋಗ್ಯ ಮತ್ತು ಜ್ಞಾನ ಇರಬೇಕು ಎಂದರೆ ಸರಿ. ಮಠದಿಂದ ತಿಂಗಳಿಗೆ ಯಾವುದೇ ಆಧಾರಯ ಇಲ್ಲಾ. ಮೃತ ಗುರುಲಿಂಗ ಶಿವಚಾರ್ಯ ಸ್ವಾಮಿಜಿ ಮಠದಿಂದ ಇವರಿಗೆ ಇಷ್ಟು ಆದಾಯ ಇತ್ತು ಎಂದು ಯಾವುದೇ ದಾಖಲೆ ಇಲ್ಲಾ. ಸಾಕ್ಷಿ ಪೂಜೆ ಮಾಡಿದ ಮೇಲೆ ದಕ್ಷಿಣೇ ಅಂತಾ ಹಣ ಸಿಗುತ್ತಿತ್ತು. ಮೃತ ಗುರುಲಿಂಗ ಶಿವಚಾರ್ಯ ಸ್ವಾಮಿಜಿ ಇವರು ನಮ್ಮ ಮನೆಯಿಂದ ಯಾವುದೇ ಹಣ ಪಡೆಯುತ್ತಿರಲಿಲ್ಲಾ, ಕೊಡುತ್ತಿರಲಿಲ್ಲಾ ಉಪಜೀವನಕ್ಕೆ ಹಣ ನೀಡುತ್ತಿದ್ದರು ಎಂದು ನುಡಿಯುತ್ತಾರೆ. ಮೃತ ಗುರುಲಿಂಗ ಶಿವಚಾರ್ಯ ಸ್ವಾಮಿಜಿ ಇವರಿಗೆ ಕಾರು ಚಾಲನೆ ಬರುತ್ತಿರಲಿಲ್ಲಾ,ಸದರಿ ಅಪಘಾತ ಅವರ ತಪ್ಪಿನಿಂದ ಆಗಿದೆ ಎಂದರೆ ಸರಿಯಲ್ಲ. ಮೃತ ಗುರುಲಿಂಗ ಶಿವಚಾರ್ಯ ಸ್ವಾಮಿಜಿ ರವರ ಹತ್ತಿರ ಚಾಲನಾ ಪತ್ರ , ವಿಮೆ, ಆರ್.ಸಿ. ಫಿಟನೆಸ್, ದಾಖಲೆಗಳು ಇರಲಿಲ್ಲಾ ಎಂದರೆ ಸರಿಯಲ್ಲ. ಕೆ.ಎ.-32-ಝೆಡ್-6011 ಈ ವಾಹನಕ್ಕೆ ಚಾಲನಾ ಪತ್ರ , ವಿಮೆ, ಆರ್.ಸಿ. ಫಿಟನೆಸ್, ದಾಖಲೆಗಳು ಇರಲಿಲ್ಲಾ ಆದ ಕಾರಣ ಪರಿಹಾರ ಪಡೆಯುವ ಉದ್ದೇಶದಿಂದ ಕೆ.ಎ.-32-ಎಎ-9559 ಈ ವಾಹನ ದಿಂದ ಅಪಘಾತ ಆಗಿದೆ ಎಂದು ಸುಳ್ಳು ಪ್ರಕರಣ ಸಲ್ಲಿಸಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಮೃತ ಗುರುಲಿಂಗ ಶಿವಚಾರ್ಯ ಸ್ವಾಮಿಜಿ ಇವರಿಗೆ ವರ್ಷಕ್ಕೆ ರೂ.2,50,000/- ಆದಾಯ ಇತ್ತು ಎಂದು ಯಾವುದೇ ದಾಖಲೆ ಸಲ್ಲಿಸಿಲ್ಲಾ. ನಾನು ಕೇಳಿರುವ ಪರಿಹಾರಕ್ಕೆ ಯಾವುದೇ ಆಧಾರ ಇಲ್ಲಾ ಎಂದರೆ ಸರಿಯಲ್ಲ .

**ಎಮ್.ವಿ.ಸಿ. ನಂಃ 1176 /2024**
**ಪಿ.ಡಬ್ಲ್ಯೂಃ1, ಮಲ್ಲಯ್ಯಾ**

ನಾನು ಪರಿಹಾರ ಪಡೆಯಲು ಸುಳ್ಳು ಪ್ರಕರಣ ಸೃಷ್ಟಿಸಿ ಕೆ.ಎ.-32-ಎಎ-9559 ಈ ವಾಹನ ದಿಂದ ಅಪಘಾತ ಆಗಿದೆ ಎಂದು ಸುಳ್ಳು ಪ್ರಕರಣ ಸಲ್ಲಿಸಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಮೃತ ಗುರುಲಿಂಗ ಶಿವಚಾರ್ಯ ಸ್ವಾಮಿಜಿ ಇವರು ಪೀಠಾಧೀಶರಾದ ಮೇಲೆ ನಮ್ಮ ಮನೆಗೆ ಯಾವುದೇ ಸಂಪರ್ಕ ಇಲ್ಲಾ ಮತ್ತು ನಾವು ಅವರ ಮೇಲೆ ಯಾವುದೇ ಅವಲಂಬಿತ ಇಲ್ಲಾ ಮತ್ತು ಅವರು ಯಾವುದೇ ಆದಾಯ ಇಲ್ಲದೇ ಸಮಾಜ ಸೇವೆ ಮಾಡಬೇಕಾಗುತ್ತದೆ ಎಂದರೆ ಸರಿಯಲ್ಲ. ಮೃತ ಗುರುಲಿಂಗ ಶಿವಚಾರ್ಯ ಸ್ವಾಮಿಜಿ ಇವರ ಪೀಠಾಧೀಶರಾದ ಮೇಲೆ ನಮಗೆ ಅವರಿಗೆ ಸಂಬಂಧ ಇರದ ಕಾರಣ ಅವರ ಮೃತ ಆದ ಮೇಲೆ ನಾವು ಪರಿಹಾರ ಕೇಳಲು ಬರುವುದಿಲ್ಲಾ ಎಂದರೆ ಸರಿಯಲ್ಲ. ನಾವು ಅವರ ಮೇಲೆ ಅವಲಂಬಿತರಾಗಿದ್ದೇವೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ .

**ಮರು ವಿಚಾರಣೆ : ಇಲ್ಲಾ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ.ಸರಿ.ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು**
**ಚಿತ್ತಾಪೂರ.**